**<u>ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,ನ್ಯಾಯಾಲಯ, ಅಂಕೋಲಾ.</u>**

ಎಮ್ ವಿ.ಸಿ. ನಂ.53/2021

ಪಿ.ಡಬ್ಲೂಃ 2

ಸಾಕ್ಷಿದಾರರ ಹೆಸರು : ಗೋಪಾಲ ಪುಂಡಲೀಕ ನಾಯ್ಕ

ತಂದೆಯ ಹೆಸರು : ಪುಂಡಲೀಕ ನಾಯ್ಕ

ವಯಸ್ಸು : 40 ವರ್ಷ

ಉದ್ಯೋಗ : ಚಾಲಕ

ವಾಸ : ಬಾವಿಕೇರಿ, ಅಂಕೋಲಾ

ದಿನಾಂಕಃ 28-01-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.ಸ

**<u>ಮುಖ್ಯ ವಿಚಾರಣೆಃ</u> ಅರ್ಜಿದಾರರ ಪರ ಶ್ರೀ ಎನ್ ಆರ್ ಎನ್ ವಕೀಲರಿಂದಃ**

**1.** ನಾನು ಮೂಲತಃ ಡೊಂಗ್ರಿ ಗ್ರಾಮದವನು. ಹಾಲಿ ಬಾವಿಕೇರಿಯಲ್ಲಿ ವಾಸ ಇದ್ದೇನೆ. ನಾನು ಚಾಲಕನಾಗಿ 15 ರಿಂದ 20 ವರ್ಷಗಳ ತನಕ ಕೆಲಸ ಮಾಡುತ್ತಾ ಇದ್ದೇನೆ. ಅರ್ಜಿದಾರ ಪ್ರಕಾಶ ಥಾಕು ನಾಯ್ಕ ನನ್ನ ಪರಿಚಿತರು ಹಾಗೂ ನನ್ನ ಊರಿನವರು. ನಾನು ಅರ್ಜಿದಾರರನ್ನು ಕಾರವಾರದಿಂದ ಮಂಗಳೂರು ಹಾಗೂ ಅಂಕೋಲಾದಿಂದ ಡೊಂಗ್ರಿಗೆ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೇನೆ. ಅರ್ಜಿದಾರರಿಗೆ ಅಪಘಾತದಿಂದ ಕಾಲಿನ ಮೂಳೆ ಮುರಿತವಾಗಿತ್ತು. ಶ್ರೀ ಆರ್ಯಾ ದುರ್ಗಾ ಟೂರಿಸ್ಟ್ ಕಚೇರಿ , ಅಂಕೋಲಾ ದ ಬಸ್ ನಿಲ್ದಾಣದ ಹತ್ತಿರ ಇದೆ. ನಾನು ಶ್ರೀ ಆರ್ಯಾ ದುರ್ಗಾ ಟೂರಿಸ್ಟ್ ನಲ್ಲಿ ಚಾಲಕನಾಗಿ ಕೆಲಸ ಮಾಡುತ್ತಾ ಇದ್ದೆ. ಆವಾಗ ನಾನು ರಶೀದಿಯನ್ನು ಪಡೆದು ಅರ್ಜಿದಾರರಿಗೆ ನೀಡಿದ್ದೆ. ಸದ್ರಿ 9 ರಶೀದಿಗಳನ್ನು ನೋಡುತ್ತಿದ್ದು, ಅವುಗಳನ್ನು ಈಗಾಗಲೇ ಒಟ್ಟಾಗಿ ನಿಪಿ-11 ಎಂದು ಗುರುತಿಸಲಾಗಿದೆ. ನಿಪಿ-11 ರಲ್ಲಿರುವ ಸಹಿಗಳು ಪ್ರವೀಣ ಸುರೇಶ ಕೇಣಿಕರವರ ಸಹಿಗಳು. ಅವರು ಕೇಣಿಯವರು. ಅದರಲ್ಲಿರುವ ಎಲ್ಲಾ ಸಹಿಗಳನ್ನು ಒಟ್ಟಾಗಿ ನಿಪಿ-11 (ಎ) ಎಂದು ತಕರಾರಿಗೆ ಒಳಪಟ್ಟು ಗುರುತಿಸಲಾಯಿತು. ನಿಪಿ-11 ರಲ್ಲಿ ತೋರಿಸಿದ ಬಾಡಿಗೆಯನ್ನು ಕಿಲೋಮೀಟರ್ ಹಾಗೂ ದಿನದ ಲೆಕ್ಕದಲ್ಲಿ ನಿರ್ಧರಿಸಿ ನಮೂದಿಸಲಾಗಿರುತ್ತದೆ.

ಅರ್ಜಿದಾರರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ, ಅವರಿಗೆ ನಡೆದಾಡಲು ಆಗದೆ ಇದ್ದುದರಿಂದ ಅವರನ್ನು ಎತ್ತಿ ಕುಳಿತು ಕೊಳ್ಳಿಸಲು ಇಬ್ಬರು ಸಹಾಯಕರು ಅವರ ಜೊತೆ ಬರುತ್ತಿದ್ದರು. ನಿಪಿ-11 ಬಿಲ್ಲುಗಳು ಅರ್ಜಿದಾರರನ್ನು ಆಸ್ಪತ್ರೆಗೆ ಟ್ಯಾಕ್ಸಿ ಯಲ್ಲಿ ಕರೆದುಕೊಂಡು ಹೋದ ಬಾಬ್ತು ನೀಡಿದ ಬಿಲ್ಲುಗಳು. ಆ ಟ್ಯಾಕ್ಸಿ ಟವೆರಾ ಕಾರು ಆಗಿತ್ತು. ಸದ್ರಿ ಕಾರು ಅಪಘಾತವಾಗಿ ಸ್ಕ್ರಾಪ್ ಗೆ ಹಾಕಲಾಗಿದೆ. ಆ ವಿಚಾರ ನನಗೆ ತಿಳಿದು ಬಂದದ್ದು. ಸದ್ರಿ ಶ್ರೀ ಆರ್ಯಾ ದುರ್ಗಾ ಟೂರಿಸ್ಟ್ ನಲ್ಲಿ ಒಂದೂವರೆ ವರ್ಷ ಚಾಲಕನಾಗಿ ಕೆಲಸ ಮಾಡಿದ್ದೆ.

**ಪಾಟೀ ಸವಾಲುಃ 3 ನೇ ಎದುರುದಾರ ರವರ ಪರ ಶ್ರೀ ಎ .ಎನ್ ಟಿ . ವಕೀಲರಿಂದಃ**

2. ಚಾಲಕನಾಗಿರಲು ಅಧಿಕೃತ ಚಾಲನಾ ಪರವಾನಿಗೆ ಇರಬೇಕು ಎಂದರೆ ಸರಿ. ನನ್ನಲ್ಲಿ ಅಧಿಕೃತ ಚಾಲನಾ ಪರವಾನಿಗೆ ಇಲ್ಲ ಎಂದರೆ ಸಾಕ್ಷಿ ಇದೆ ಎಂದು ನುಡಿಯುತ್ತಾರೆ. ಆ ಚಾಲನಾ ಪರವಾನಿಗೆ ಈಗ ನನ್ನ ಬಳಿ ಇದೆ. ಅದನ್ನು ನ್ಯಾಯಾಲಯ ಪರಿಶೀಲಿಸಲು ಹಾಜರು ಪಡಿಸಲು ನನಗೆ ತೊಂದರೆ ಇಲ್ಲ. ನಾನು ಯಾವ ದಿನಾಂಕದಂದು ಚಾಲನಾ ಪರವಾನಿಗೆ ಪಡೆದದ್ದು ಎಂದು ನನಗೆ ನೆನಪಿಲ್ಲ. ಆದರೆ ಸುಮಾರು 20 ವರ್ಷ ವಾಗಿರಬಹುದು. ನನಗೆ ಟ್ರಾನ್ಸ ಪೋರ್ಟ್ ವಾಹನಗಳನ್ನು ಚಾಲನೆ ಮಾಡಲು ಪರವಾನಿಗೆ ಇಲ್ಲ ಎಂದರೆ ಸಾಕ್ಷಿ ಮೊದಲು ಇತ್ತು ಈಗ ಇಲ್ಲ ಎಂದು ನುಡಿಯುತ್ತಾರೆ. ದಿಃ 10-01-2007 ಕ್ಕೆ ನಾನು ಚಾಲನಾ ಪರವಾನಿಗೆ ಪಡೆದಿರಬಹುದು. ಟ್ರಾನ್ಸ ಪೋರ್ಟ್ ವಾಹನ ಚಾಲನಾ ಪರವಾನಿಗೆ ಒಟ್ಟಿಗೆ ಪಡೆದಿದ್ದು ನಂತರ 8 ವರ್ಷ ದಲ್ಲಿ ನವಿಕರಣ ಮಾಡದೇ ರದ್ದಾಗಿರುತ್ತದೆ. ನನ್ನ ಪ್ರಕಾರ ಅದು 2015 ರಲ್ಲಿ ರದ್ದಾಗಿದೆ ಎಂದರೆ ಇರಬಹುದು.

3. ನಾನು ಶ್ರೀ ಆರ್ಯಾ ದುರ್ಗಾ ಟೂರಿಸ್ಟ್ ನಲ್ಲಿ 2019 ರ ಮಧ್ಯ ಸಾಲಿನಲ್ಲಿ ಸೇರಿ ಸುಮಾರು ಒಂದುವರೆ ವರ್ಷ ಕೆಲಸ ಮಾಡಿದ್ದೇನೆ . ಆದರೆ ಸ್ಪಷ್ಟವಾಗಿ ದಿನಾಂಕ ಹೇಳಲಾಗುವುದಿಲ್ಲ. ಯಾವುದೇ ಟೂರಿಸ್ಟ್ ಕಚೇರಿ ಅಸ್ತಿತ್ವದಲ್ಲಿದ್ದಾಗ ಅದರ letter head ಹಾಗೂ ರಶೀದಿಗಳಲ್ಲಿ ಅದರ ವಿಳಾಸ ನಮೂದಿಸಿರುತ್ತಾರೆ ಎಂದರೆ ಸರಿ. ನಿಪಿ-11 ರಲ್ಲಿ ಕಚೇರಿಯ ವಿಳಾಸ ಹೇಳಿಲ್ಲ ಎಂದರೆ ಸರಿ. ಶ್ರೀ ಆರ್ಯಾ ದುರ್ಗಾ ಟೂರಿಸ್ಟ್ ಪಾಲುದಾರ ಸಂಸ್ಥೆನಾ ಅಥವಾ ಒಬ್ಬ ಮಾಲಿಕನ ಸಂಸ್ಥೆ ನಾ ಎಂದು ನನಗೆ ಗೊತ್ತಿಲ್ಲ. ನಿಪಿ-11 ರಲ್ಲಿ ಶ್ರೀ ಆರ್ಯಾ ದುರ್ಗಾ ಟೂರಿಸ್ಟ್ ನ ಮಾಲಿಕರ ಹೆಸರು ಇಲ್ಲ ಎಂದರೆ ಸಾಕ್ಷಿ ಮಾಲಕರ ಸಹಿಗಳು ಇವೆ ಎಂದು ನುಡಿಯುತ್ತಾರೆ. ಸದ್ರಿ ಪ್ರವೀಣ ಕೇಣಿಕರ ರವರು ಆ ಟೂರಿಸ್ಟ್ ಕಾರಿನ ಮಾಲಿಕರು. ನಿಪಿ-11 ರ ರಶೀದಿಗಳು

ಅರ್ಜಿದಾರರನ್ನು ಆಸ್ಪತ್ರೆಗಳಿಗೆ ನಾನೆ ಕರೆದುಕೊಂಡು ಹೋಗಿ ಬಂದ ಬಗ್ಗೆ ಪ್ರವೀಣ ಕೇಣಿಕರ ರವರಿಂದ ಪಡೆದು ನೀಡಿದ ರಶೀದಿಗಳು. ನನ್ನ ಪ್ರಕಾರ ಸದ್ರಿ ಪ್ರವೀಣ ಕೇಣಿಕರ ರವರು ಚಾಲಕನಾಗಿ ಅರ್ಜಿದಾರರನ್ನು ಎಲ್ಲೂ ಕರೆದುಕೊಂಡು ಹೋಗಿಲ್ಲ ಎಂದರೆ ಸಾಕ್ಷಿ ಸರಿ ಎಂದು ಹೇಳಿ, ನಾನೇ ಕರೆದುಕೊಂಡು ಹೋಗಿರುವುದು ಎಂದು ನುಡಿಯುತ್ತಾರೆ.

4. ನಿಪಿ-11 ರಲ್ಲಿರುವ ಎಲ್ಲಾ ರಶೀದಿಗಳಲ್ಲಿ ಚಾಲಕನ ಸಹಿ ಎಂಬ ಜಾಗ ಇದೆ ಎಂದರೆ ಸರಿ. ಸದ್ರಿ ಪ್ರವೀಣ ಕೇಣಿಕರ ರವರು ರಶೀದಿ ಪುಸ್ತಕವನ್ನು ಇಟ್ಟು ಕೊಂಡಿದ್ದರು. ರಶೀದಿ ಪುಸ್ತಕದ ಮೂಲ ರಶೀದಿಗಳ ನಕಲು ರಶೀದಿಗಳು ಆ ರಶೀದಿ ಪುಸ್ತಕದಲ್ಲಿ ಇರುತ್ತದೆ ಎಂದರೆ ಸರಿ. ಮೂಲ ರಶೀದಿಯನ್ನು ಸಂಬಂಧಪಟ್ಟ ಗ್ರಾಹಕನಿಗೆ ನೀಡಿ ಅದರ ನಕಲು ರಶೀದಿಯನ್ನು ರಶೀದಿ ಪುಸ್ತಕದಲ್ಲಿ ಉಳಿಸಿಕೊಳ್ಳುತ್ತಾರೆ ಎಂದರೆ ಸರಿ. ಆ ನಕಲು ರಶೀದಿ ಮೇಲೆ ಗ್ರಾಹಕನ ಸಹಿ ಪಡೆಯುತ್ತಾರೆ ಎಂದರೆ ಗೊತ್ತಿಲ್ಲ. ರಶೀದಿ ಪುಸ್ತಕದಲ್ಲಿ ರಶೀದಿಗಳಿಗೆ ಕ್ರಮಾಗತ ಸಂಖ್ಯೆ ನಮೂದು ಇರುತ್ತದೆ ಎಂದರೆ ಸರಿ. ರಶೀದಿ ನೀಡುವಾಗ ಹೋದ ದಿನದ ರಶೀದಿ ಹಾಗೂ ಮುಂದಿನ ದಿನದ ರಶೀದಿಯನ್ನು ಅದರ ನಂತರದ ದಿನ ಹೋದ ದಿವಸ ಕೊಡುತ್ತಾರೆ ಎಂದರೆ ಸರಿ. ಟ್ಯಾಕ್ಸಿಯ ಮಾಲಿಕರು ಇಂತಹವರು ಎಂದು ತೋರಿಸಲು ಅಧಿಕೃತ ದಾಖಲೆ ನೊಂದಣಿ ಪ್ರಮಾಣ ಪತ್ರ ಎಂದರೆ ಸರಿ. ನಾನು ಕೆಎ-30/ಆ-2901 ರ ಮಾಲಿಕರು ಇಂತಹವರು ಎಂದು ತೋರಿಸುವ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿ. ಅರ್ಜಿದಾರರರು ಅದರ ಮಾಲಿಕತ್ವ ದಾಖಲೆಯನ್ನು ಹಾಜರು ಪಡಿಸಲು ಹೇಳಿಲ್ಲ ಎಂದರೆ ಸರಿ.

5. ಟ್ಯಾಕ್ಸಿ ಬಾಡಿಗೆ ಬೇರೆ ಬೇರೆ ರೀತಿಯ ವಾಹನಗಳಿಗೆ ಬೇರೆ ಬೇರೆ ರೀತಿ ಇರುತ್ತದೆ ಎಂದರೆ ಸರಿ. ಕಿಲೋಮೀಟರ್ ಆಧಾರದಲ್ಲಿ ಬಾಡಿಗೆ ಪಡೆಯುವುದಾದರೆ ಯಾವ ರೀತಿಯ ವಾಹನ ಹಾಗೂ ಎಷ್ಟು ಕಿಲೋಮೀಟರ್ ಓಡಿದೆ ಹಾಗೂ ಕಿಲೋಮೀಟರ್ ಗೆ ಎಷ್ಟು ಬಾಡಿಗೆ ಎಂದು ನಮೂದಿಸಬೇಕು ಎಂದರೆ ಸರಿ. ಅದೇ ರೀತಿ ರಾತ್ರಿ ಕಾಯುವಿಕೆ ಇದ್ದಾಗ ಅದಕ್ಕೆ ಇಂತಿಷ್ಟು ಚಾರ್ಜ ಇರುತ್ತದೆ ಎಂದರೆ ಸಾಕ್ಷಿ ಇರುತ್ತದೆ ಆದರೆ ಸಾದಾ ರಶೀದಿ ಕೊಡಿ ಎಂದು ಕೇಳಿದಾಗ ನಾವು ಅಷ್ಟೆ ತೋರಿಸಿ ಕೊಡುತ್ತೇವೆ ಹಾಗೂ ಕೆಲಸದಲ್ಲಿದ್ದವರಿಗೆ ಮಾತ್ರ ಎಲ್ಲಾ ನಮೂದಿಸಿ ಕೊಡುತ್ತೇವೆ ಎಂದು ನುಡಿಯುತ್ತಾರೆ. ನಿಪಿ-11 ರಲ್ಲಿ ತೋರಿಸಿರುವ ಮೊತ್ತಗಳು ನಮಗೆ ಸಂದಾಯವಾಗಿದೆ ಎಂದು ತೋರಿಸುವ ನಮೂದು ಅದರಲ್ಲಿ ಇಲ್ಲ

ಎಂದರೆ ಸರಿ. ಬಿಲ್ಲು ನೀಡಿದ ನಂತರ ಅದರ ಹಣ ಪಾವತಿಸಿದ ನಂತರ ಪಾವತಿ ರಶೀದಿ ನೀಡಬೇಕು ಎಂದರೆ ಸರಿ. ಪ್ರವೀಣ ಕೇಣಿಕರ ರವರು ಪಾವತಿ ರಶೀದಿ ನೀಡಿಲ್ಲ ಎಂದರೆ ಸಾಕ್ಷಿ ಸರಿ ಎಂದು ಹೇಳಿ ನಿಪಿ–11 ಅಷ್ಟೆ ನೀಡಿರುವುದು ಎಂದು ನುಡಿಯುತ್ತಾರೆ. ನಿಪಿ–11 ನ್ನು ಅರ್ಜಿದಾರರು ಸೃಷ್ಟಿಸಿ ಕೊಂಡದ್ದು ಎಂದರೆ ಸರಿಯಲ್ಲ. ನಾನು ಶ್ರೀ ಆರ್ಯಾದುರ್ಗಾ ಟೂರಿಸ್ಟ್ ನಲ್ಲಿ ಪ್ರವೀಣ ಕೇಣಿಕರ ರವರ ಟವೆರಾ ಕಾರ ನಲ್ಲಿ ಚಾಲಕನಾಗಿ ಕೆಲಸ ಮಾಡುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರವೀಣ ಕೇಣಿಕರ ರವರು ನಿಪಿ–11 ರಲ್ಲಿ ತೋರಿಸಿರುವ ವಾಹನದ ಮಾಲಿಕರಲ್ಲ ಹಾಗೂ ಅವರು ಶ್ರೀ ಆರ್ಯಾ ದುರ್ಗಾ ಟೂರಿಸ್ಟ್ ನ ಮಾಲಿಕರು ಯಾ ಪಾಲುದಾರರು ವಾ ವಾಹನ ಆ ಸಂಸ್ಥೆಗೆ ಪೂರೈಕೆದಾರರು ಅಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಲು ಸಹಾಯಕರಾಗಿ ಇಬ್ಬರು ಸಹಾಯಕರು ಬರುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರವೀಣ ಕೇಣಿಕರ ರವರಲ್ಲಿ ನಿಪಿ–11 ರಲ್ಲಿ ಹೇಳಿರುವ ವಾಹನದ ನೊಂದಣಿ ಪ್ರಮಾಣ ಪತ್ರ ಬೇಕು ಎಂದು ಕೇಳಿಲ್ಲ. ಶ್ರೀ ಆರ್ಯಾ ದುರ್ಗಾ ಟೂರಿಸ್ಟ್ ನಲ್ಲಿ ಚಾಲಕನಾಗಿ ಕೆಲಸ ಮಾಡುತ್ತಿದ್ದೆ ತೋರಿಸುವ ದಾಖಲೆಗಳು ನನ್ನಲ್ಲಿ ಇಲ್ಲ.

**ಪಾಟೀ ಸವಾಲುಃ 1 ನೇ ಎದುರುದಾರರು ಮತ್ತು ಅವರ ಪರ ವಕೀಲರು ಗೈರು ಹಾಜರಾಗಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಗಿದೆ.**

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.